## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಚಿಂಚೋಳಿ

***ಸಿ. ಸಿ. ನಂ. 1272/2025***

**ಫಿರ್ಯಾದಿ :** ಸರ್ಕಾರದ ಪರವಾಗಿ ಸುಲೆಪೇಟ ಪೋಲೀಸರು.

- ವಿರುದ್ದ -

**ಆರೋಪಿತರುಃ**

1. ರಾಜಕುಮಾರ ತಂದೆ ಓಂನಾಥ ಚಿಮ್ಮನಕಟ್ಟಿ.
2. ಸಾವಿತ್ರಮ್ಮ ಗಂಡ ರಾಜಕುಮಾರ ಚಿಮ್ಮನಕಟ್ಟಿ.

### ದೋಷಾರೋಪಣೆ

ನಾನು **ಶ್ರೀ ದತ್ತುಕುಮಾರ ಜವಳಕರ. B.B.A. L.L.B (Hons) L.L.M.** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ, ಆರೋಪಿರಾದ ನಿಮ್ಮ ಮೇಲೆ ಮಾಡುವ ಆರೋಪಣೆ ಏನೆಂದರೆ.

ದಿನಾಂಕಃ 22-03-2025 ರಂದು ಸಾಯಂಕಾಲ 06-30 ಗಂಟೆ ಸುಮಾರಿಗೆ ಸುಲೆಪೇಟ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಬೆಡಕಪಳ್ಳಿ ಗ್ರಾಮದಲ್ಲಿ ರಾಜಕುಮಾರ 1ನೇ ಆರೋಪಿ ನೀನು ಚಾಸಾ-1 ಜಗದೇವಿ ನೇದ್ದವರ ಮನೆಯೊಳಗೆ ಬಂದು ನನಗೆ ಮಾತಾಡು ನಿನ್ನ ಮೇಲೆ ಮನಸ್ಸಾಗಿದೆ ನೀನು ನನ್ನ ಜೊತೆ ದೈಹಿಕ ಸಂಪರ್ಕ ಮಾಡ ಎಂದ ಕಾರಣ ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 75(1) ಸಹವಾಚಕ ಕಲಂ 3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತಿಯೆಂದು,

2. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ರಾಜಕುಮಾರ 1ನೇ ಆರೋಪಿ ನೀನು ಚಾಸಾ-1 ಜಗದೇವಿ ನೇದ್ದವಳಿಗೆ ಗಂಡ ಇಲ್ಲದೇ ಇರುವುದನ್ನು ಗಮನಿಸಿ ಹಿಂಬಾಲಿಸುವುದು, ಮೇಲೆ ಬಿದ್ದು ಮಾತನಾಡುವುದು ಮಾತನಾಡುವಂತೆ ಒತ್ತಾಯ ಮಾಡಿದ್ದರಿಂದ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 78 ಸಹವಾಚಕ ಕಲಂ 3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

3. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ರಾಜಕುಮಾರ 1ನೇ ಆರೋಪಿ ನೀನು ಚಾಸಾ-1 ಜಗದೇವಿ ನೇದ್ದವರ ಮನೆಯ ಒಳಗಡೆ ಅತಿಕ್ರಮಮ ಪ್ರವೇಶ ಮಾಡಿದ ಕಾರಣ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 329(4) ಸಹವಾಚಕ ಕಲಂ 3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

4. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿ ನೀನು ಚಾಸಾ-1 ನೇದ್ದವಳಿಗೆ ಕೈಯಿಂದ ಮನಬಂದಂತೆ ಹೊಡೆ ಬಡೆ ಮಾಡಿದ ಕಾರಣ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 115(2) ಸಹವಾಚಕ ಕಲಂ 3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

5. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿ ನೀನು ಚಾಸಾ-1 ನೇದ್ದವಳಿಗೆ ತಡೆದು ನಿಲ್ಲಿಸಿದ ಕಾರಣ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 126(2) ಸಹವಾಚಕ ಕಲಂ 3(5)

ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

6. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿ ನೀವು ಚಾಸಾ-1 ನೇದ್ದವಳಿಗೆ ಸೀರಿ ಹಿಡಿದು ಎಳೆದಾಡಿ ಮಾನಭಂಗ ಮಾಡಲು ಪ್ರಯತ್ನಿಸಿದ ಕಾರಣ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 74 ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

7. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 2ನೇ ಆರೋಪಿ ನೀನು ಚಾಸಾ-1 ನೇದ್ದವಳಿಗೆ ರಂಡೀ ನನ್ನ ಗಂಡನಿಗೆ ಬಿಡು ಅಂತಾ ಅವಾಚ್ಯ ಶಬ್ದಗಳಿಂದ ಬೈದು ಕಾರಣ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 352 ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

8. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 1ನೇ ಆರೋಪಿ ನೀನು ಚಾಸಾ-1 ನೇದ್ದವರಿಗೆ ನಿನಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ ಕಾರಣ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 351(2), 351(3) ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಪ್ರಶ್ನೆ-1: ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?
ಉತ್ತರಃ ಅರ್ಥವಾಯಿತು

ಪ್ರಶ್ನೆ-2: ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸುವಿರೊ?

ಉತ್ತರಃ ವಿಚಾರಣೆಯಾಗಬೇಕು

ದಿನಾಂಕಃ 14.11.2025.
ಸ್ಥಳ : ಚಿಂಚೋಳಿ

(ಶ್ರೀ ದತ್ತಕುಮಾರ ಜವಳಕರ)
C/c ಹೆಚ್ಚುವರಿ ಪ್ರ.ದ.ನ್ಯಾ.ದಂಡಾಧಿಕಾರಿ,
ಚಿಂಚೋಳಿ.